# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕೇಂದ್ರ ಸರ್ಕಾರವು ಜಾರಿಗೆ ತಂದಿರುವ The Real Estate (Regulations and Development) Act, 2016 ರನ್ವಯ "ದಿ ಕರ್ನಾಟಕ ಇಂಟಿರಿಮ್ ರಿಯಲ್ ಎಸ್ಟೇಟ್ ರೆಗ್ಯೂಲೇಟರಿ ಅಥಾರಿಟಿಯನ್ನು ನೇಮಿಸುವ ಬಗ್ಗೆ.

**ಓದಲಾಗಿದೆ:** 1. ಕೇಂದ್ರ ಸರ್ಕಾರದ The Real Estate (Regulations and Development) Act, 2016 , ದಿನಾಂಕ:26-03-2016.

2. ಸರ್ಕಾರದ ಅಧಿಸೂಚನೆ ಸಂಖ್ಯೆ: ವಇ 109 ಕಗೃಮಂ 2017, ದಿನಾಂಕ:10-07-2017.

**ಪ್ರಸ್ತಾವನೆ:-**

ಕೇಂದ್ರ ಸರ್ಕಾರವು "The Real Estate (Regulation and Development) Act 2016" ನ್ನು ದಿನಾಂಕ:26-03-2016ರಿಂದ ಜಾರಿಗೆ ತಂದಿದ್ದು, ರಿಯಲ್ ಎಸ್ಟೇಟ್ ವಲಯವನ್ನು ಪ್ರೋತ್ಸಾಹಿಸಲು ಮತ್ತು ಭಾರತದ ಯಾವುದೇ ಭಾಗದಲ್ಲಿ ನಿವೇಶನ, ಮನೆ, ಅಪಾರ್ಟ್‌ಮೆಂಟ್ ಅಥವಾ ಬಿಲ್ಡಿಂಗನ್ನು, ಖರೀದಿ ಮಾಡುವ ಗ್ರಾಹಕರ ಹಿತರಕ್ಷಣೆ ಕಾಯ್ದುಕೊಳ್ಳಲು ಸದರಿ ಕಾಯ್ದೆಯ ಸೆಕ್ಷನ್ 20(1)ರಲ್ಲಿ "The Real Estate Regulatory Authority"ನ್ನು ಸ್ಥಾಪಿಸಲು, ಈ ಕೆಳಕಂಡಂತೆ ಅವಕಾಶ ಕಲ್ಪಿಸಿದೆ.

> "Provided also that until the establishment of a Regulatory Authority under this section, the appropriate Government shall, by order, designate any Regulatory Authority or any officer preferably the Secretary of the department dealing with Housing, as the Regulatory Authority for the purposes under this Act ".

ಇದಕ್ಕೆ ಅನುಗುಣವಾಗಿ ರಾಜ್ಯ ಸರ್ಕಾರವು ದಿ ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು, 2017 (The Karnataka Real Estate (Regulation and Development) Rules, 2017)ಅನ್ನು ರೂಪಿಸಿ ಮೇಲೆ ಓದಲಾದ ಕ್ರ.ಸಂ.(2)ರಲ್ಲಿ ತಿಳಿಸಿರುವ ಅಧಿಸೂಚನೆಯನ್ನು ಹೊರಡಿಸಿದೆ. ದಿ ಕರ್ನಾಟಕ ರಿಯಲ್ ಎಸ್ಟೇಟ್(ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು 2017, (The Karnataka Real Estate (Regulation and Development) Rules 2017)ರಲ್ಲಿನ ನಿಯಮ 18(8)ರಲ್ಲಿ, ಸದರಿ ಕಾಯ್ದೆಯ ಸೆಕ್ಷನ್ 20(1)ರ ಉದ್ದೇಶವನ್ನು ಪಾಲಿಸಲು ಖಾಯಂ ಆಗಿ "ದಿ ಕರ್ನಾಟಕ ರಿಯಲ್ ಎಸ್ಟೇಟ್ ರೆಗ್ಯೂಲೇಟರಿ ಅಥಾರಿಟಿ"ಯನ್ನು ಸ್ಥಾಪಿಸುವವರೆಗೆ, ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ, ಇವರನ್ನು "The Karnataka Interim Regulatory Authority" ಆಗಿ ನೇಮಿಸಲು ನಿಯಮಗಳಲ್ಲಿ ಅವಕಾಶ ಕಲ್ಪಿಸಿದೆ. ಅದರಂತೆ, ಪರಿಶೀಲಿಸಿ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ ವಇ 157 ಕಗೃಮಂ 2017,</u>**
**<u>ಬೆಂಗಳೂರು, ದಿನಾಂಕ:14-07-2017</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, The Real Estate (Regulation and Development) Act 2016ಅನ್ನು ರಾಜ್ಯದಲ್ಲಿ ತ್ವರಿತವಾಗಿ ಜಾರಿಗೆ ತರಲು ಹಾಗೂ ಕಾಯ್ದೆಯ ಉದ್ದೇಶವನ್ನು ಈಡೇರಿಸುವ ದೃಷ್ಟಿಯಿಂದ, ಸದರಿ ಕಾಯ್ದೆಯಲ್ಲಿನ ಕಲಂ 20(1)ರಲ್ಲಿ ಕಲ್ಪಿಸಿರುವ ಅವಕಾಶದಂತೆ ಹಾಗೂ "ದಿ ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ)

ನಿಯಮಗಳು 2017"ರಲ್ಲಿನ ನಿಯಮ 18(8)ರನ್ವಯ, ಸಾಂದರ್ಭಿಕವಾಗಿ ಮತ್ತು ಖಾಯಂಯಾಗಿ ದಿ ಕರ್ನಾಟಕ ರಿಯಲ್ ಎಸ್ಟೇಟ್ ರೆಗ್ಯೂಲೇಟರಿ ಅಥಾರಿಟಿಯನ್ನು ಸ್ಥಾಪಿಸುವವರೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಸತಿ ಇಲಾಖೆ ಇವರನ್ನು "ದಿ ಕರ್ನಾಟಕ ಇಂಟರಿಮ್ ರಿಯಲ್ ಎಸ್ಟೇಟ್ ರೆಗ್ಯೂಲೇಟರಿ ಅಥಾರಿಟಿಯನ್ನಾಗಿ" ನೇಮಿಸಿ ಆದೇಶಿಸಿದೆ.

ಮುಂದುವರೆದು, ಖಾಯಂ ಆಗಿ The Karnataka Real Estate Regulatory Authority ನೇಮಕವಾದ ಕೂಡಲೇ, ಮಧ್ಯಂತರವಾಗಿ ಗೊತ್ತುಪಡಿಸಿದ್ದ ಪ್ರಾಧಿಕಾರದ ಬಳಿ ವಿಚಾರಣೆಗಾಗಿ ಬಾಕಿಯಿದ್ದ ಎಲ್ಲಾ ಅರ್ಜಿಗಳು, ದೂರುಗಳು ಅಥವಾ ಮೊಕದ್ದಮೆಗಳು The Karnataka Real Estate Regulatory Authority ಗೆ ವರ್ಗಾವಣೆಗೊಳಿಸತಕ್ಕದ್ದು, ಮಧ್ಯಂತರ ಪ್ರಾಧಿಕಾರದಿಂದ ವರ್ಗಾವಣೆಗೊಂಡ ಸಮಯದಲ್ಲಿ ಪ್ರಕರಣಗಳು ಯಾವ ಹಂತದಲ್ಲಿ ವಿಚಾರಣೆಗೆ ಬಾಕಿಯಿದ್ದವೊ, ಆ ಹಂತದಿಂದಲ್ಲೇ ಖಾಯಂ ಆಗಿ ಸ್ಥಾಪನೆಗೊಂಡ ಪ್ರಾಧಿಕಾರವು ವಿಚಾರಣೆಯನ್ನು ಮುಂದುವರೆಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಶಿವಕುಮಾರಸ್ವಾಮಿ ಸಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ-1(ಪ್ರ)
ವಸತಿ ಇಲಾಖೆ.

14/7/17

ಇವರಿಗೆ:-

ಸಂಕಲನಕಾರರು, ಕರ್ನಾಟಕ ರಾಜ್ಯ ವಿಶೇಷ ರಾಜ್ಯಪತ್ರ, ವಿಕಾಸಸೌಧ. ಬೆಂಗಳೂರು-ಈ ಆದೇಶವನ್ನು ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ, ಅದರ 100 ಪ್ರತಿಗಳನ್ನು ಈ ಇಲಾಖೆಗೆ ಕಳುಹಿಸಿಕೊಡುವಂತೆ ಕೋರಿದೆ.

ಪ್ರತಿ:-

1. ಮಹಾಲೇಖಪಾಲರು(ಲೆಕ್ಕಪತ್ರ ಮತ್ತು ಹಕ್ಕುಗಳು) ಕರ್ನಾಟಕ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರು/ಪ್ರಧಾನ ಕಾರ್ಯದರ್ಶಿಯವರು, ವಿಧಾನಸೌಧ.
3. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/ ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರಿಗೆ,
4. ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ. ವಿಧಾನಸೌಧ
5. ಮಾನ್ಯ ವಸತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
6. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
7. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಸತಿ ಇಲಾಖೆ.
8. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ವಸತಿ ಇಲಾಖೆ.
9. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.